ಅ) ತುರುವೇಕೆರೆ ತಾಲ್ಲೂಕು ಸಂಚಿಗೆ, ಮಾಚೇನಹಳ್ಳಿ, ತುಡಗ ಇವುಗಳು ಪ್ರಾಥಮಿಕ ಆರೋಗ್ಯ ಘಟಕ ಆಗಿದ್ದು ಸರಿಯಾದ ಸೌಕರ್ಯ ಜನರಿಗೆ ದೊರಕದಿರುವುದು ಸರ್ಕಾರಕ್ಕೆ ಗೊತ್ತಿದೆಯೇ;

ಆ) ಹಾಗಿದ್ದಲ್ಲಿ ಇವುಗಳನ್ನು (3) ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಯಾವಾಗ ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ತುರುವೇಕೆರೆ ತಾಲ್ಲೂಕಿಗೆ ಆಶ್ರಯ ಮನೆ ಹಂಚಿಕೆ

75 (88) - ಶ್ರೀ ಲಕ್ಷ್ಮೀನಾರಾಯಣ ಎಂ ಡಿ (ತುರುವೇಕೆರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಆಶ್ರಯ ಮನೆಗಳಿಗೆ ಹೆಚ್ಚಿನ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ವರ್ಷಕ್ಕೆ 1000 ಕ್ಕೂ ಹೆಚ್ಚು ಮನೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) :

ಅ) ಹೌದು.

ಆ)

ವರ್ಷ	ಮಂಜೂರಾದ ಮನೆಗಳು		
	ಗ್ರಾಮೀಣ ಆಶ್ರಯ	ನವಗ್ರಾಮ ಆಶ್ರಯ	ನಗರ ಆಶ್ರಯ
2000-01	480	150	30
2001-02	330	240	30

ತುರುವೇಕೆರೆ ತಾಲ್ಲೂಕ ಹೆಗ್ಗೆರೆ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ

76 (89) - ಶ್ರೀ ಲಕ್ಷ್ಮೀನಾರಾಯಣ ಎಂ ಡಿ (ಅಣ್ಣಯ್ಯ) : ಮಾನ್ಯ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಹೆಗ್ಗೆರೆ ಗ್ರಾಮದಲ್ಲಿ ಕೊಳವೆ ನೀರಿನ ಕಾಮಗಾರಿ ಯಾವಾಗ ಪ್ರಾರಂಭವಾಯಿತು;

ಆ) ಕಾಮಗಾರಿ ಮುಗಿದರೂ ಜನರಿಗೆ ನೀರು ಕೊಡದಿರಲು ಕಾರಣವೇನು;

ಇ) ಹಾಗಿದ್ದಲ್ಲಿ ಯಾವಾಗ ನೀರು ಒದಗಿಸಲಾಗುವುದು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ಸಚಿವರು) :

ಅ) ಹೆಗ್ಗೆರೆ ಗ್ರಾಮದ ಕೊಳವೆ ನೀರು ಸರಬರಾಜು ಯೋಜನೆಯನ್ನು 99-2000ನೇ ಸಾಲಿನಲ್ಲಿ ಕೈಗೆತ್ತಿಕೊಂಡಿದ್ದು, ಯೋಜನೆ ಪೂರ್ಣಗೊಂಡಿದೆ.

ಆ) ವೋಲ್ಟೇಜ್ ಸಮಸ್ಯೆಯಿಂದಾಗಿ ನೀರು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ.

ಇ) ಹೊಸ ಟ್ರಾನ್ಸ್‌ಫಾರ್ಮರ್ ಅನ್ನು ಅಳವಡಿಸಿ ಆದ್ಯತೆ ಮೇಲೆ ಗ್ರಾಮಕ್ಕೆ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮುಂಡರಗಿ ತಾಲ್ಲೂಕಿನಲ್ಲಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದ ಕಳಪೆ ಕಾಮಗಾರಿಗಳು

78 (149) - ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನಲ್ಲಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ಬಡನಾಳ್-ಬೆಣ್ಣಿಹಳ್ಳಿ ರಸ್ತೆ ಹಾಗೂ ಶಿಂಗಟಾಲೂರು ಮುಂದಿನ ರಸ್ತೆ ಮತ್ತು ಶಿಂಗಟಾಲೂರು ಸ್ಮಶಾನಕ್ಕೆ ಹೋಗುವ ರಸ್ತೆ ಹಾಗೂ ಇತರೆ ಕಾಮಗಾರಿಗಳಲ್ಲಿ ಕಳಪೆ ಮಟ್ಟದ ಜಲ್ಲಿ ವಗೈರೆ ಹಾಗಿದ್ದು ಮತ್ತು ಸರಿಯಾಗಿ ಕೆಲಸ ಮಾಡದೇ ಹಣದ ವೆಚ್ಚವನ್ನು ತೋರಿಸಿದ್ದು ಕಳಪೆ ಮಟ್ಟದ ಕಾಮಗಾರಿಯನ್ನು ಸ್ವತಃ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳವರು ಪರಿಶೀಲನೆ ಮಾಡಿದ್ದು ನಿಜವೇ;

ಆ) ಈ ಕಾಮಗಾರಿ ಕಳಪೆ ಮಟ್ಟದ್ದೇ ಆಗಿದ್ದಲ್ಲಿ ಇದರ ಬಗ್ಗೆ ಸಂಬಂಧಪಟ್ಟವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ;

ಇ) ಈ ಕಾಮಗಾರಿ ಕಳಪೆ ಮಟ್ಟದಲ್ಲಿ ಆಗಲಿಕ್ಕೆ ಆ ಭಾಗದ ಜಿಲ್ಲಾ ಪಂಚಾಯ್ತಿ ಸದಸ್ಯರ ಸಂಬಂಧಿಕರ ಅಧಿಕಾರಿಗಳಿಗೆ ಬೆದರಿಕೆ ಹಾಕಿ ಪರೋಕ್ಷವಾಗಿ ತಾನೆ ಕೆಲಸ ಮಾಡುವುದರಿಂದ ಕಳಪೆ ಆಗಲಿಕ್ಕೆ ಕಾರಣವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಗಮನಕ್ಕೆ ಬಾರದಿದ್ದರೆ ವಿಚಾರಣೆ ಮಾಡಿ ಕ್ರಮ ಕೈಗೊಳ್ಳಲಾಗುವುದೆ;

ಉ) ಈ ಎಲ್ಲಾ ಕಾಮಗಾರಿಗಳನ್ನು ಗುಣ ನಿಯಂತ್ರಣಾ ವಿಭಾಗದಿಂದ ತನಿಖೆ ಮಾಡಿಸಿ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಎಂ. ಪೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):